
## 12. ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಭೋಗಿ, ಶಿಕಾರಿಪುರ ತಾ!!

ನಲಿಕಲಿ ಯಶೋಗಾಥೆ 2019-20 ನೇ ಸಾಲಿನಲ್ಲಿ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಭೋಗಿ, ಶಿಕಾರಿಪುರ ತಾ ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಸಣ್ಣ ಗ್ರಾಮದ ಪುಟ್ಟ ಶಾಲೆಯಲ್ಲಿ 2019-20 ನೇ ಸಾಲಿನಲ್ಲಿ 1 ನೇ ತರಗತಿಗೆ ಮಕ್ಕಳು , ಹಾಗೂ 2 ನೇ ತರಗತಿಗೆ 9 ಮಕ್ಕಳು ದಾಖಲಾಗಿದ್ದು. ನಲಿಕಲಿ ವಿಧಾನ ಕನ್ನಡ ಶಾಲೆಗಳಲ್ಲಿರುವ ವಿಧಾನದಲ್ಲಿದಂತೆ ನಡೆಯುತ್ತಿರಲಿಲ್ಲ , ಹೀಗಾಗಿ ನಮ್ಮ ಶಿಕಾರಿಪುರ ತಾ ಮೂರು ಉರ್ದು ಕ್ಲಸ್ಟರ್ ನ ಶಾಲೆಗಳಲ್ಲಿ ಬೋಧನೆ ಮಾಡುತ್ತಿರುವ ನಲಿ-ಕಲಿ ಶಿಕ್ಷಕರನ್ನು ಶಿಕಾರಿಪುರ ಬಿ ಆರ್ ಸಿ ಯಲ್ಲಿ ಮಾನ್ಯ ಬಿ ಆರ್ ಓ ಶ್ರೀ ಟಿ ಎಸ್ ಮುರಳಿಧರ್ ರವರು 2019-20 ನೇ ಸಾಲಿನಲ್ಲಿ ಕನ್ನಡ ಶಾಲೆಗಳಿಗೆ 3 ಕ್ಲಸ್ಟರ್ ನ ಉರ್ದು ಶಿಕ್ಷಕರನ್ನು ಕನ್ನಡ ಶಾಲೆ ಗಳಿಗೆ ಕನ್ನಡ ನಲಿ-ಕಲಿ ಬೋಧನೆ ಮಾಡುವ ಕ್ರಮದ ವೀಕ್ಷಣೆ ಮಾಡಲು 3 ತಂಡಗಳಲ್ಲಿ ಪೂರ್ವಾಹ್ನದವರೆಗೂ ಅವಕಾಶ ಮಾಡಿಕೊಡಲಾಗಿತ್ತು , ನಂತರ ಅಪರಾಹ್ನ ಅವಧಿಯಲ್ಲಿ 3 ಕ್ಲಸ್ಟರ ನ ವೀಕಷಣೆ ಮಾಡಿದ ಶಿಕ್ಷಕರನ್ನು ಮೂರು ತಂಡಗಳಲ್ಲಿನ ಶಿಕ್ಷಕರನ್ನು ಮಾನ್ಯ ಶ್ರೀ ಬಿ ಆರ್ ಓ ರವರು ಪ್ರಶ್ನೆಗಳನ್ನು ಕೇಳಿದರು ಇದರಲ್ಲಿ ಪ್ರಮುಖ ಸಮಸ್ಯೆ ತಟ್ಟೆಚಲನೆಯಾಗಿತ್ತು. ಹಾಗೂ ಎಲ್ಲಾ ಮಕ್ಕಳಿಗೂ ಪ್ರಗತಿ ನೋಟದಲ್ಲಿ ತಾವು ಕಲಿತ ಮೆಟ್ಟಿಲುಗಳನ್ನು ಸ್ವತಃ ಗುರುತಿಸುವ ಸಮಸ್ಯೆ ಸರ್ವೇ ಸಾಮಾನ್ಯವಾಗಿತ್ತು, ನಲಿಕಲಿ ಪಾಠದ ವೀಕ್ಷಣೆ ನಂತರ ಬಿ ಆರ ಓ ರವರು ನಲಿಕಲಿ ವಿಧಾನದಂತೆ ಉರ್ದು ಶಾಲೆಗಳಲ್ಲಿಯೂ ಕೂಡ ಶೇ 100 ಸಾಧನೆ ಆಗಬೇಕೆಂದು ತಿಳಿಸಿದರು , ಅದಸ್ಕೂರ ಶಿಕಾರಿಪುರ 3 ಉರ್ದು ಸಿ ಆರ್ ಪಿಗಳಿಗೆ ಶಾಲಾ ಭೇಟಿ ಅವಧಿಯಲ್ಲಿ ನಲಿಕಲಿ ಕೊಠಡಿಗೆ ಹೋಗಬೇಕೆಂದು ಕುಂದುಕೊರತೆ, ಕಲಿಕೆಯಲ್ಲಿ ಹಿಂದುಳಿಯುವುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕೆಂದು ಸೂಚನೆ ನೀಡಿರುತ್ತಾರೆ.





2019-20 ನೇ ಸಾಲಿನಲ್ಲಿ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಭೋಗಿ, ಒಟ್ಟು 1 ನೇ ಮತ್ತು 2 ನೇ ತರಗತಿಗಳಿಗೆ 9 ಮಕ್ಕಳಿದ್ದು ಈ ಸಾಲಿನಲ್ಲಿ ಶಿಕಾರಿಪುರ ಬಿ ಆರ್ ಸಿ ಯಿಂದ ಉರ್ದು ಶಾಲೆಗಳಿಗೆ ಒಂದು ಅವಲೋಕನ ತಂಡವನ್ನು ರಚಿಸಲಾಗಿತ್ತು , ಇದರಲ್ಲಿ 3 ಸಿ ಆರ್ ಪಿ ಗಳನ್ನು ಅದಲೂ ಬದಲೂ ಮಾಡಿ ಶಾಲೆಗಳಿಗೆ ಬೇಟಿ ನೀಡಲು ಅವಕಾಶ ಮಾಡಿಕೊಡಲಾಗಿತ್ತು , ಅವಲೋಕನ ತಡದಕಲ್ಲಿ ಪ್ರಮುಖ ಮಾಹಿತಿಗಳು ಸಂಪೂರ್ಣ ಇದಲ್ಲಿ 1 ಅಂಕ ಇಲ್ಲದಿದಲ್ಲಿ ಎಂದು ಪರಿಗಣಿಸ್ವಟ್ಟಿತ್ತು . ಹೀಗಾಗಿ ನಮ್ಮ ಶಾಲೆಯಲ್ಲಿ ಪೂರ್ವ ತಯಾರಿಯಾಗಿ ನಲಿಕಲಿ ಹಂತಗಳನ್ನು ಅಂದರೆ 1 ) ವಾಲ್ ಸ್ಲೇಟ್ ಪಾಟಿ ರೂಪದಲ್ಲಿ ರಚಿಸಲಾಗಿತ್ತು ನಂತರ 2 ನೇ ಹಂತ ಕಾರ್ಡಗಳನ್ನು ವಿಷಯವಾರು ಲೋಗೋವಾರು ಮಟ್ಟಿಲುಗಳ ಪ್ರಕಾರ ಚಟುವಟಿಕೆಗಳ ಪ್ರಕಾರ ಜೋಡಿಸಿ ಮಕ್ಕಳಿಗೆ ಸುಲಭ ರೀತಿಯಲ್ಲಿ ಸಿಗುವಂತೆ ಜೋಡಿಸಲಾಗಿತ್ತು, ಕಲಿಕ ಸಾಮಾಗ್ರಿಗಳನ್ನು ಶಿಕ್ಷಕರು ಹಾಗೂ ಮಕ್ಕಳ ಸಹಾಯದೊಂದಿಗೆ ಅನುಪಯುಕ್ತ ಸಾಮಾಗ್ರಿಗಳಿಂದ ಕಡ್ಡಿ ಬೀಜಗಳು ಕಲ್ಲುಗಳು ಇತ್ಯಾಧಿಗಳನ್ನು ಬಳಸಿ ಕಲಿಕಾ ಉಪಕರಣಗಳಾಗಿ ತಯಾರಿಸಿ ಬಳಸಲಾಗಿತ್ತು಼ ನಂತರ ಗುಂಪು ತಟ್ಟೆಗಳಿಗೆ ಆಕರ್ಷಕವಾದ ನೈಸರ್ಗಿಕ ಚಿತ್ರಗಳನ್ನು ಐದು ತಟ್ಟೆಗಳಲ್ಲಿ ಬಣ್ಣಗಳಿಂದ ಚಿತ್ರಿಸಲಾಗಿತ್ತು ಅದೇ ರೀತಿ ಆರನೇ ತಟ್ಟೆಯ ಉಪಯೋಗ ಹಾಗೂ ಬಳಕೆಯ ಬಗ್ಗೆ ಮಕ್ಕಳಿಗೆ ತಿಳಿಸಲಾಗಿತ್ತು , ಪ್ರಗತಿ ನೋಟ ಅವಮಾನ ನಕಾಶೆ ಅದರಲ್ಲಿ ಸ್ವತಃ ಕಲಿತ ಮೆಟ್ಟುಗಳನ್ನು ಗುರುತಿಸಿ ದಾಖಲೆ ಮಾಡಲು ಅವಕಾಶ ನೀಡಲಾಗಿತ್ತು ಕಲಿಕಾ ಚಪ್ಪರದಲ್ಲಿ ತಾನು ಮಾಡಿದ ಚಿತ್ರಗಳನ್ನು ಸಂಖ್ಯಾ ಸೂಚಕಫಲಕಗಳನ್ನು ಅಕ್ಷರ ಮಾದರಿಗಳು ಪ್ಲಾಸ್ಟಿಕ್ ಕಾರ್ಡ್ಗಳ ಚಪ್ಪರದಲ್ಲಿ ಕಟ್ಟಿ ಪ್ರದರ್ಶಿಸಲಾಗಿತ್ತು.

ಅಭ್ಯಾಸ ಪುಸ್ತಕಗಳನ್ನು ಕಲಿಕಾ ವಿಷಯಗಳಿಗೆ ಅನುಗುಣವಾಗಿ ಮನೆಗಳಿಗೆ ತೆಗೆದುಕೊಂಡು ಹೋಗಲು ಅವಜಕಾಶ ಮಾಡಿಕೊಡಲಾಗಿತ್ತು ಎಲ್ಲಾ ಮಕ್ಕಳಿಗೂ ಸೂಕ್ತ ಸ್ಥಳದ ಅವಕಾಶ ಮಾಡಿಕೊಡಲಾಗಿತ್ತು , ಅಭಿವ್ಯಕ್ತಿ ಸ್ವತಂತ್ರ್ಯ ಚಟುವಟಿಕೆಗಳನ್ನು ಮಾಲು ಹೇಳಲು ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು.

ಒಟ್ಟಾರೆ ಈ ಮೈಕ್ರೋ ಅಧ್ಯಯನದಿಂದ ಶಿಕ್ಷಕರ ತಪ್ಪನ್ನು ತಿದ್ದಲು ಒಂದು ಅವಕಾಶವಾಗಿದ್ದು , ಉತ್ತಮ ಕಲಿಕೆಗಾಗಿ ಇಂತ ಒಂದು ಅವಲೋಕನ ಅಗತ್ಯವಿರುತ್ತದೆ. ಇದರಿಂದ ಮಕ್ಕಳ ಕಲಿಕೆ ಉತ್ತಮ ಮಾಡಲು ಹಾಗೂ ಪೋಷಕರಲ್ಲಿ ನಲಿಕಲಿ ವಿಧಾನದಿಂದ ಖಾಸಗಿ ಶಾಲೆಗಳಿಗೆ ನಾವು ಸ್ಪರ್ಧೆ ಮಾಡಬಹುದು ಎಂಬ ಅಂಶವನ್ನು ಸ್ವತಃ ಎಸ್ ಡಿ ಎಂ ಸಿ ರವರು ವ್ಯಕ್ತ ಪಡಿಸಿರುತ್ತಾರೆ. ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಭೋಗಿ 2019-20 ನೇ ಸಾಲಿನಲ್ಲಿ A+ ಗ್ರೇಡ್ ನ್ನು ಪಡೆದಿರುತ್ತೇವೆ, ಇದಕ್ಕೆ ಮೂಲಕಾರಣ ಕರ್ತರು ನಮ್ಮ ಮಾನ್ಯ ಬಿಇಒ ಶ್ರೀ ಉಮಾಮಹೇಶ್ ರವರು ಮತ್ತು ಬಿ.ಆರ್.ಪಿ ಮಾನ್ಯ ಟಿ.ಎಸ್.ಮುರಳೀಧರ್ ಸರ್ ಅವರಿಗೆ ನಮಗೆ ಮಾರ್ಗದರ್ಶಕರಾಗಿರುತ್ತಾರೆ, ಒಟ್ಟಾರೆ ಎಲ್ಲ ಉರ್ದು ಶಾಲೆಗಳು ನಲಿಕಲಿ ಪ್ರಗತಿ ಸಾಧಿಸಿರುತ್ತಾರೆ.

2019-20 ನೇ ಸಾಲಿನಲ್ಲಿ ಶಿಕ್ಷಕರ ದಿನಾಚರಣೆಯೆಂದು ಶಿಕಾರಿಪುರ ತಾಲ್ಲೂಕಿನ ಮೂರು ಶಾಲೆಗಳಿಗೆ ಉತ್ತಮ ನಲಿಕಲಿ ಶಾಲೆಗಳೆಂದು ಗುರುತಿಸಿ ಅದರಲ್ಲಿ ನಮ್ಮ ಶಾಲೆ ಕೂಡ ಒಂದು ಆಗಿದ್ದು , ಈ ದಿನ ನಮಗೆ ನಲಿಕಲಿ ಬಹುಮಾನವಾಗಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆವತಿಯಿಂದ 5000 ರೂಗಳನ್ನು ಪಡೆದಿರುತ್ತೇವೆ, ಇದರಲ್ಲಿ ನಲಿಕಲಿಗೆ ಸಂಬಂಧಿಸಿದಂತೆ ಕಲಿಕಾಪೋಕರಣಗಳನ್ನು ಖರೀದಿಸಿ ಮತ್ತು ತಯಾರಿಕೆಗಾಗಿ ಬಳಸಲಾಗಿದೆ ಹಾಗೂ ಗ್ರಾಮದ ಹಳೆ ವಿದ್ಯಾರ್ಥಿ ಸಂಘವತಿಯಿಂದ ಸುಮಾರು 15000 ರೂಗಳನ್ನು ದೇಣಿಗೆ ಪಡೆದು ನಲಿಕಲಿ ಕೊಠಡಿಗಾಗಿ ಒಂದು ಇಂಚಿನ ಪ್ಲೇವುಡ್ ನಲ್ಲಿ ನಲಿಕಲಿ ಕಾರ್ಡ್ ಇಡುವ ಮೈಲುಗಲ್ಲನ್ನು ಮಾಡಿಸಲಾಗಿದ್ದು ಈ ಒಂದು ಮೇಲುಗಲ್ಲು ವಿಷಯವಾರು ಅಂದರೆ ಉರ್ದು ಅಂಕಣವೇ ಬೇರೆ ಹಾಗೂ ಗಣಿತ ಅಂಕಣವೇ ಬೇರೆ ಹಾಗೂ ಪರಿಸರ ಅಧ್ಯಯನಕ್ಕಾಗಿ ಮೆಟ್ಟಿಲುವಾರು 1 ಮತ್ತು 2 ನೇ ತರಗತಿಗೆ ಮಕ್ಕಳಿಗಾಗಿ ಮಾಡಲಾಗಿದೆ. ಅದೇ ರೀತಿ ಈ ಹಣ ಬಳಸಿ ದುಂಡು ಮೇಜಿನಂತೆ ತಟ್ಟೆಯನ್ನು ತಯಾರಿಸಿದ್ದು ಅದಕ್ಕೆ ಪ್ರತ್ಯೇಕ ನೈಸರ್ಗಿಕ ಬಣ್ಣವನ್ನು ಕೊಟ್ಟು ಮಕ್ಕಳಿಗೆ ಆಕರ್ಷವಾದ ರೀತಿಯಲ್ಲಿ ನಲಿಕಲಿ ಪದ್ಧತಿಯನ್ನು ಅಳವಡಿಸಲಾಗಿದ್ದು ಹಾಗು ಈ ದುಂಡು ಮೇಜಿನ ತಟ್ಟೆಗಳಿಗೆ ಉತ್ತಮವಾದ ಪ್ಲಾಸ್ಟಿಕ್ ಚೇರ್ ಗಳ ವ್ಯವಸ್ಥೆಯನ್ನು ಮಾಡಲಾಗಿದೆ , ಅದೇ ರೀತಿ ಪಪಡ್ ಷೋ ನಲ್ಲಿ ಅನೇಕ ಪ್ರಾಣಿಗಳ ಸಂಕೇತಗಳನ್ನು ಬಳಸಿ ಅಂದರೆ ಆನೆ , ಜಿಂಕೆ , ನಾಯಿ , ಸಿಂಹ , ಹುಲಿ , ಬೆಕ್ಕು , ಮೊಸಲೆ ಮುಂತಾದ ಪಪಡ್ ಗಳನ್ನು ಬಳಸಿ ಮಕ್ಕಳಿಗೆ ಕಥೆಯ ಮೂಲಕ ಪಾಠವನ್ನು ಮನದಟ್ಟವಾಗುವಂತೆ ಹೇಲಿಕೊಡಲಾಗುತ್ತದೆ. ಹಾಗೂ ಹವಮಾನ ನಕಾಶೆಯನ್ನು ಬಣ್ಣದ ಸ್ವರೂಪದಲ್ಲಿ ಬಳಸಿ ವಾತಾವರಣದ ವಿವಿಧ ಬಗೆಯ ಹಾಗೂ ನೀರಿನ ಮಹತ್ವ ವನ್ನು ಬಾಲ್ಯದಿಂದ ಮಕ್ಕಳಿ ನೀಡುವಂತೆ ಮಾಡಲಾಗುತ್ತದೆ.

ಕಲಿಕಾಪೋಕರಣದಲ್ಲಿ ಮೆಟ್ಟಿಲುವಾರು ಕಲಿಕಾಪೋಕರಣ ತಯಾರಿಸಿ ಕಲಿಕಾ ಚಪ್ಪರದಲ್ಲಿ ಪ್ರದರ್ಶಿಸಲಾಗುತ್ತದೆ, ಅದೇ ರೀತಿಯಾಗಿ ವಾಲ್ ಸ್ಲೇಟ್ ನಲ್ಲಿ ವಿವಿಧ ಆಕಾರದ ಪ್ರಾಣಿ , ಪಕ್ಷಿಗಳ ಚಿತ್ರಗಳನ್ನು ಬಿಡಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಹಾಗೂ ಅಭ್ಯಾಸ ಪುಸ್ತಕವನ್ನು ಸೂಕ್ತ ರೀತಿಯಲ್ಲಿ ಬಳಸಿ ಕಲಿಕೆಗೆ ಸಂಬಂಧಿಸಿದ ಅಂಶಗಳನ್ನು ಮಕ್ಕಳಿಗೆ ಹೇಳಿಕೊಡಲಾಗುತ್ತದೆ. ಹಾಗು ನಲಿಕಲಿಯಿಂದ ಶಿಕ್ಷಕರು ಹಾಗೂ ಮಕ್ಕಳು ಖುಷಿಯಿಂದ ತನ್ನದೇಯಾದ ವೇಗದಲ್ಲಿ ಕಲಿಕೆಗೆ ಮಹತ್ವವಾಗಿದೆ ಎಂಬುವ ಅಂಶವನ್ನು ನಾವು ಅರಿತ್ತಿದೇವೆ, ಮಕ್ಕಳ ಹೆಚ್ಚಾಗಿ ಆಟದಲ್ಲಿ ಆಸಕ್ತಿ ಹೊಂದಿದ ಕಾರಣ ಗಣಿತದಲ್ಲಿ ಸಂಖ್ಯೆಗಳನ್ನು ಪ್ಲಾಸ್ಟಿಕ್ ಮಾದರಿಯಲ್ಲಿ ಮುಟ್ಟಿ ನೋಡುವಂತಹ ಹಾಗೂ ಅದರ ಚಿತ್ರ ಹಾಗೂ ಬರವಣಿಗೆ ಸ್ವರೂಪವನ್ನು ಸುಲಭವಾಗಿ ತಿಳಿಸಿಕೊಡಲಾಗುತ್ತದೆ. ಇದರಲ್ಲಿ 1 ನೇ ತರಗತಿಗೆ 1 ರಿಂದ 9 ಸಂಖ್ಯೆ ತದನಂತರ 0 ಯ ಕಲ್ಪನೆ ತದನಂತರ 11 ರಿಂದ 20 ರವರೆಗೆ ಸಂಖ್ಯೆಗಳನ್ನು ಜೋಡಿಸುವುದು ಇದರಲ್ಲಿ ಸಂಕಲನ ಹಾಗೂ ವ್ಯವಕಲನ ಹಾಗೂ ಚಿಕ್ಕದ್ದು , ದೊಡ್ಡದ್ದು ಎಂಬುವ ಹಾಗೂ ಏರಿಕೆ ಕ್ರಮ ಮತ್ತು ಇಳಿಕೆ ಕ್ರಮಗಳನ್ನು ಸರಳವಾಗಿ ಕಲಿಸಬಹುದಾಗಿದೆ ಅದೇರೀತಿ 2ನೇ ತರಗತಿಲ್ಲಿ ಮಕ್ಕಳಿಗೆ ಸಂಕಲನ ಹಾಗೂ ಸಂಕಲನದಿಂಥ ವ್ಯವಕಲನ ಸ್ವರೂಪವನ್ನು ಮಕ್ಕಳಿಗೆ ಕಲಿಸಲು ಈ ವಿಧಾನ ಬಹಳ ಉಪಯೋಗವಾಗಿದೆ. ಗುಣಾಕಾರದಲ್ಲಿ ಮಗ್ಗಿಯನ್ನು ತೆಂಗಿನ ಕಡ್ಡಿಗಳನ್ನು ಬಳಸಿ ಮಗ್ಗಿಗಳನ್ನು ಕಲಿಸಲು ನಲಿಕಲಿ ವಿಧಾನ ತುಂಬಾ ಸಹಕಾರವಾಗಿದೆ.

ಪರಿಸರ ಅಧ್ಯಯನದಲ್ಲಿ ಮಗುವಿಗೆ ದಿನನಿತ್ಯ ಅವನ ಮೂಲಭೂತ ಅವಶ್ಯಕತೆಯ ಬಗ್ಗೆ ತಿಳಿಸಬಹುದಾಗಿದೆ, ಅದೇರೀತಿಯಾಗಿ ವಾತಾವರಣಕ್ಕೆ ಸಂಬಂಧಿಸಿದಂತೆ ಕಾಡಿನ ಮಹತ್ವವನ್ನು ಹಾಗೂ ಜಲಚರಗಳು ಯಾವ ರೀತಿ ಮನುಷ್ಯನಿಗೆ ಸಹಕಾರವಾಗಿದೆ ಎಂಬುವುದನ್ನು ಮನದಟ್ಟಿಸಬಹುದು , ಹಾಗು ದ್ವಿಚಕ್ರ , ತ್ರಿಚಕ್ರ , ನಾಲ್ಕು ಚಕ್ರಗಳ ವಾಹನಗಳ ಸರಳ ಯೋಜನೆಯನ್ನು ತಯಾರಿಸಬಹುದು ಅದೇರೀತಿಯಾಗಿ 2ನೇ ತರಗತಿಯಲ್ಲಿ ಗಾಳಿಯ ಮಹತ್ವ ಸಾರುವ ಸರಳ ಪ್ರಯೋಗಗಳನ್ನು ಮಾಡಬಹುದು ಅವರ ವೈಯಕ್ತಿಕ ಸ್ವಚ್ಛತೆಗಾಗಿ ಪ್ರತಿನಿತ್ಯ ಶೌಚಾಲಯ ಹಾಗೂ ಸ್ನಾನದ ಮಹತ್ವವನ್ನು ಕಲಿಸಬಹುದು ನಮ್ಮ ದೇಶಕ್ಕಾಗಿ ಕೊಡುಗೆ ಕೊಟ್ಟಂತಹ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಕೇಳಲು ಸಾಧ್ಯವಾಗಿದೆ.


ಭಾಷೆಗೆ ಬಂದರೆ ಉರ್ದು ಒಂದು ಹಿಂದಿ ಬಾಷೆಯ ತಂಗೆಯಾಗಿದ್ದು ಇದನ್ನು ಕಲಿಯಲು ಎರಡು ರೀತಿಯ ಮೂಲ ಅಕ್ಷರಗಳನ್ನು ಕಲಿಯಲು ಸಲುಭವಾದ ವಿಧಾನ ನಲಿಕಲಿಯಾಗಿದೆ, ಇದ್ದರಿಂದ ಒಟ್ಟಾರೆ ನಮ್ಮ ಶಾಲೆಯಲ್ಲಿ ಮಕ್ಕಳ ಕಲಿಕೆ

ಉತ್ತಮವಾಗಿದ್ದು ಮುಂದಿನ ತರಗತಿಗಳಿಗೆ ಮನೋಶಾಸ್ತ್ರದ ಮಾತಿನಂತೆ ಮುಂದಿನ ಅಭ್ಯಾಸಕ್ಕಾಗಿ ಈ ವಿಧಾನ ಸಹಕಾರಿಯಾಗಿದೆ, ಇದ್ದರಿಂಥ ಪೋಷಕರು ತಮ್ಮ ಮಕ್ಕಳ ಕಲಿಕೆ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತಾರೆ, ಹಾಗೂ ನಮ್ಮ ಶಾಲೆಯಲ್ಲಿ 5ನೇ ತರಗತಿಯಲ್ಲಿ ಸತತ 2012 ರಿಂದ ಅಲ್ಪಸಂಖ್ಯಾತ ಮೊರಾರ್ಜಿ ದೇಶಾಯಿ ಶಾಲೆಗೆ ಆಯ್ಕೆ ನೂರಾರಷ್ಟು ಫಲಿತಾಂಶವನ್ನು ನೀಡಲಾಗಿದೆ, ನಲಿಕಲಿ ವಿಧಾನದಿಂದ ನಮ್ಮ ವೈಯಕ್ತಿಕ ಅಭಿಪ್ರಾಯ ಇದಾಗಿದ್ದು ಖಾಸಗಿ ಶಾಲೆಗೆ ನಾವು ಸ್ವರ್ದೆ ಮಾಡಬಹುದು ಎಂಬುವುದಾಗಿದೆ. ಹಾಗೂ ನಲಿಕಲಿ ವಿಧಾನದಿಂದ ಮಕ್ಕಳ ಕಲರವ ಉತ್ತಮವಾಗಿದ್ದು ಹೀಗಾಗಿ ನಮ್ಮ ಶಾಲೆಯ ದ್ಯೇಯ ವಾಕ್ಯ ಉತ್ತಮ ಸಮಾಜಕ್ಕಾಗಿ ಗುಣಮಟ್ಟದ ಶಿಕ್ಷಣ ಈ ನಿಟ್ಟಿನಲ್ಲಿ ನಮ್ಮ ಆತ್ಮಗೆ ತೃಪ್ತಿಯಾದಷ್ಟು ಸಮಾಧಾನವನ್ನು ಕಂಡುಕೊಂಡಿದ್ದೇವೆ, ಆಫ್ರಿಕಾದ ಒಂದು ವಿಶ್ವವಿದ್ಯಾಲಯದ ದ್ವಾರದಲ್ಲಿ ಒಂದು ಮಾತು ಬರೆಯಲಾಗಿತ್ತು ಒಂದು ದೇಶವನ್ನು ಹಾಳುಮಾಡಬೇಕಾದರೆ ಅಣುಸಾಮಾಗ್ರಿಗಳನ್ನು ಉಪಯೋಗಿಸದೇ ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಹಾಳುಮಾಡಿದರೆ ವೈದ್ಯರು ರೋಗಿಗಳನ್ನು ಕೊಲ್ಲುತ್ತಾರೆ , ಇಂಜಿನಿಯರಗಳು ರಸ್ತೆ ಕಟ್ಟಡ ಅಣೆಕಟ್ಟುಗಳನ್ನು ಹಾಳುಮಾಡುತ್ತಾರೆ ಇದಕ್ಕಿಂತ ಮಹತ್ವವಾದ ಮಾತು ಶಿಕ್ಷಣವರತಾಗಿಯು ಬೇರೆ ಎಲ್ಲಿಂದಲೂ ಸಂಪಾದಿಸಲು ಸಾಧ್ಯವಿಲ್ಲ.






















قومی نشانات
IInd E.V.S ماحولیات
Ist E.V.S ماحولیات


MATHS
URDU

